O.S.No. 460/2017 P W - 1

ದಿನಾಂಕ 18.08.2023 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.S.P.K. For H.K.S. ವಕೀಲರಿಂದ :</u>

ನನ್ನ ವಾದ ಮತ್ತು ಪ್ರಮಾಣ ಪತ್ರದಲ್ಲಿ ಇರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ರಸ್ತೆಗಾಗಿ ದಾವೆಯನ್ನು ಹೂಡಿರುತ್ತೇನೆ. ನಮಗೆ ರಸ್ತೆ ಬೇಕು ಎಂದು ದಾವೆಯನ್ನು ಹೂಡಿರುತ್ತೇವೆ. ಪ್ರತಿವಾದಿಗಳು ನಮ್ಮ ಸ್ವತ್ತಿಗೆ ತೊಂದರೆಯನ್ನು ಕೊಡುತ್ತಿದ್ದಾರೆ ಎಂದು ದಾವೆಯನ್ನು ಹೂಡಿರುವುದಿಲ್ಲ.

ದಾವಾ ಸ್ವತ್ತಿನ ಸರ್ವೆ ನಂಬರ್ 236 ಮತ್ತು 237 ಆಗಿರುತ್ತದೆ. ಸರ್ವೆ ನಂಬರ್ 236 ರಲ್ಲಿ 1 ಎಕರೆ 5 ಗುಂಟೆ, 237 ರಲ್ಲಿ 35 ಗುಂಟೆ ವಿಸ್ತೀರ್ಣ ಇರುತ್ತದೆ. ಸರ್ವೆ ನಂಬರ್ 236 ಮತ್ತು 237 ಆಸ್ತಿಗಳಿಗೆ ಪ್ರತಿವಾದಿಗಳು ತೊಂದರೆಯನ್ನು ನೀಡುತ್ತಿರಲಿಲ್ಲ ಸಾಕ್ಷಿಯು ಮುಂದುವರೆದು ರಸ್ತೆಗೆ ತೊಂದರೆ ಇರುತ್ತದೆ ಎಂದು ನುಡಿಯುತ್ತಾರೆ.

ಬಿ ಅನುಸೂಚಿ ಸ್ವತ್ತುಗಳು ಎ ಅನುಸೂಚಿ ಸ್ವತ್ತಿನಲ್ಲಿ ಬರುವುದಿಲ್ಲ ಎಂದರೆ ಸರಿ. ಸರ್ವೆ ನಂ. 237 ರ ಬಿ ಅನುಸೂಚಿ ಸ್ವತ್ತಿನಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಅಬ್ದುಲ್ ಖಾಲಕ್ ಸಾಹೇಬ್ ರವರು ನಮಗೆ ಕ್ರಯವಾಗುವ ಮುಂಚೆಯೇ ಪ್ರತಿವಾದಿಯ ತಂದೆ ನಂಜೇಗೌಡರಿಗೆ ಸರ್ವೆ ನಂಬರ್ 237 ರಲ್ಲಿ 2 ಎಕರೆ ವಿಸ್ತೀರ್ಣ ವನ್ನು ಕ್ರಯ ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಪೂರ್ವದ ಕಡೆಗೆ ಪ್ರತಿವಾದಿಗಳ ಸ್ವತ್ತು ಬರುತ್ತದೆ ಎಂದರೆ ಸರಿ. ನಿಪಿ-8 ಮತ್ತು 9 ರಲ್ಲಿ ತೋರಿಸಿರುವ ಮನೆಗಳು ಪ್ರತಿವಾದಿಗಳಿಗೆ ಸೇರಿದ್ದು ಎಂದರೆ ಸರಿ. ನಿಪಿ-1 ರ ಕೊನೆಯ ಪುಟದಲ್ಲಿ ರಸ್ತೆಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಪಿ-1 ರಲ್ಲಿ ಉತ್ತರದ ಕಡೆಗೆ ರಸ್ತೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನಾನು ದಾವೆಯಲ್ಲಿ ಪೂರ್ವದ ಕಡೆ ಇರುವ ಪ್ರತಿವಾದಿಯ ಸ್ವತ್ತಿನಲ್ಲಿ ರಸ್ತೆಯನ್ನು ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪೂರ್ವ ಮತ್ತು ಪಶ್ಚಿಮದ ಕಡೆ ಇರುವ ರಸ್ತೆಯು ಪ್ರತಿವಾದಿಗೆ ಸೇರಿದ್ದ ಕಾರಣ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ರಸ್ತೆಯ ಬಗ್ಗೆ ಯಾವುದೇ ಒಕ್ಕಣೆ ತೋರಿಸಿಲ್ಲ ಎಂದರೆ ಸರಿ. ನಿಪಿ-8 ಮತ್ತು 9 ರಲ್ಲಿ ಇರುವ ಮನೆಗಳು ಪೂರ್ವಾಭಿಮುಖವಾಗಿ ಇರುತ್ತದೆ ಎಂದರೆ ಸರಿ. ನಂಜೇಗೌಡರು ಕ್ರಯಕ್ಕೆ ಪಡೆದ ನ ಂತರ ಅವರ ಮಕ್ಕಳಾದ ಪ್ರತಿವಾದಿಗಳು ಮೌಖಿಕ ವಿಭಾಗ ಮಾಡಿಕೊಂಡು ಮನೆಗಳನ್ನು ಕಟ್ಟಿಕೊಂಡಿರುತಾರೆ ಎಂದರೆ ಸರಿ.

ನಿಪಿ-8 ಮತ್ತು 9 ರಲ್ಲಿ ಕಾಣಿಸುವಂತಹ ಖಾಲಿ ಜಾಗ ಪ್ರತಿವಾದಿಗಳ ಹಿತ್ತಲಿಗೆ ಹೋಗಲು ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-8 ಮತ್ತು 9 ರಲ್ಲಿ ಕಾಣಿಸುವಂತಹ ಖಾಲಿ ಜಾಗ ಪ್ರತಿವಾದಿಗಳಿಗೆ ಸೇರಿದ್ದೇ ಹೊರತು ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-8 ಮತ್ತು 9 ರಲ್ಲಿ ಕಾಣಿಸುವಂತಹ ಖಾಲಿ ಜಾಗ ನಮಗೆ ಸೇರಿದ್ದು ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ದಾವಾ ಸ್ವತ್ತಿನ ಉತ್ತರಕ್ಕೆ ಸರ್ಕಾರಿ ನಾಲೆ ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಬಾಜುದಾರರಾದ ಗಂಗಾಧರಪ್ಪ ರವರ ಜಮೀನಿನ ಕಡೆಯಿಂದ ನಮ್ಮ ಜಮೀನಿಗೆ ಬರಲು ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ